**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 77/15**

**ಸಿ.ಡಬ್ಲ್ಯೂ-8 ಪಿ.ಡಬ್ಲ್ಯೂ-6**

| | | |
|---|---|---|
| ಸಾಕ್ಷಿದಾರರ ಹೆಸರು | : | ಮೋಹನ ಕುಮಾರ್ |
| ತಂದೆಯ/ ಗಂಡನ ಹೆಸರು | : | ದಾಸಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಅಬಕಾರಿ ಉಪಅಧಿಕ್ಷಕರು |
| ವಾಸ ಸ್ಥಳ | : | ಹುಣಸೂರು |

**ದಿನಾಂಕ 04.10.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನಾನು 2006 ರಿಂದ 2009 ರವರೆಗೆ ಅಬಕಾರಿ ಉಪನಿರೀಕ್ಷಕರಾಗಿ ಹೆಚ್ ಡಿ ಕೋಟೆ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 15.01.2001 ರಂದು ಚಾಸಾ 1 ರಿಂದ 5 ರವರ ಜೊತೆ ಹೂಡಿ ಕ್ಯಾತನಹಳ್ಳಿ ಗೇಟ್ ಬಳಿ ರಸ್ತೆ ಕಾವಲು ಮತ್ತು ಗಸ್ತು ನಡೆಸುತ್ತಿದ್ದಾಗ ಗಂಗಡಹೊಸಹಳ್ಳಿ ಗ್ರಾಮದ ರಾಜು ಎಂಬುವವರು ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಬಂದ ಖಚಿತ ಮಾಹಿತಿ ಮೇರೆಗೆ ಆಸಾಮಿ ಮನೆ ಬಳಿ ಹೋಗಿ ನೋಡಲಾಗಿ 7-10 ಜನರ ಗುಂಪು ಸೇರಿದ್ದು, ಸದರಿ ವಿಷಯವನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೋರಿರುತ್ತೇವೆ ಅವರು ನಿರಾಕರಿಸಿರುತ್ತಾರೆ. ಸದರಿ ಆಸಾಮಿ ಮನೆ ಬಾಗಿಲು ತೆರೆದಿದ್ದು, ನ್ಯಾಯಾಲಯದಿಂದ ಶೋಧನಾ ವಾರೆಂಟ್ ಪಡೆಯಲು

ಕಾಲಾವಕಾಶ ಇಲ್ಲದ ಕಾರಣ ಸ್ಥಳ ದಲ್ಲಿ ಶೋಧನಾ ಸಮುಚ್ವ ತಯಾರಿಸಿ ಇಲಾಖಾ ಸಿಬ್ಬಂದಿಗಳನ್ನು ಪಂಚರನ್ನಾಗಿಸಿ, ಸದರಿ ಆಸಾಮಿ ಹೆಸರು ಕೇಳಲಾಗಿ ರಾಜು ಎಂದು ತಿಳಿಸಿರುತ್ತಾರೆ. ಆತನಿಗೆ ಸದರಿ ವಿಷಯ ತಿಳಿಸಿ ಮನೆಯ ಒಳಗೆ ಪ್ರವೇಶಿಸಿ ನೋಡಲಾಗಿ ಅಕ್ಕ ಪಕ್ಕ ಎರಡು ಕೊಠಡಿಗಳು ಇದ್ದು, ಎಡಭಾಗದ ಕೊಠಡಿಯಲ್ಲಿ ಒಂದು ಮಂಚ ಇದ್ದು, ಮಂಚದ ಕೆಳಗೆ ಒಂದು ಬಿಳಿ ಬಣ್ಣದ ಪ್ಲಾಸ್ಟೀಕ್ ಚೀಲ್ ಕಂಡುಬಂದಿರುತ್ತದೆ. ಸದರಿ ಚೀಲವನ್ನು ಪರಿಶೀಲಿಸಿದಾಗ 180 ml ನ 50 ಬಾಟಲ್ ಗಳು ಇದ್ದವು. ಅದರಲ್ಲಿ 30 ಬಾಟಲ್ ಗಳು ಓರಿಜಿನಲ್ ಚಾಯ್ಸು ಡಿಲೇಕ್ಸ ವಿಸ್ಕಿ ಇದ್ದು, 20 ಬಾಟಲ್ ಗಳು ನಂ 1 ಹೈವೆ ವಿಸ್ಕಿ ಇರುತ್ತವೆ. ಸದರಿ ಬಾಟಲ್ ಗಳನ್ನು ಪರಿಶೀಲಿಸಲಾಗಿ ಕಲ್ಮಷದಿಂದ ಕೂಡಿದ್ದು ನಕಲಿ ಬಾಟಲ್ ಗಳು ಆಗಿದ್ದು, ಸದರಿ ಬಾಟಲ್ ಗಳನ್ನು ಎತಕ್ಕಾಗಿ ಇಟ್ಟುಕೊಂಡಿದ್ದೀರಾ ಎಂದು ಕೇಳಲಾಗಿ ಮಾರಾಟಕ್ಕಾಗಿ ಎಂದು ತಿಳಿಸಿರುತ್ತಾರೆ. ಸದರಿ ಬಾಟಲ್ ಗಳಲ್ಲಿ ಯಾವುದೇ ರಹದಾರಿ ಇಲ್ಲ ಎಂದು ತಿಳಿಸಿರುತ್ತಾರೆ. ಸದರಿ ಬಾಟಲ್ ಗಳನ್ನು ಕರೆಮೂದ್ದನಹಳ್ಳಿ ಗ್ರಾಮದ ಶಿವಕುಮಾರ್ ಎಂಬುವವರು ತಂದು ಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಅವುಗಳಲ್ಲಿ 18 ಬಾಟಲ್ ಓರಿಜಿನಲ್ ಚಾಯ್ಸು ವಿಸ್ಕಿ ಮತ್ತು 10 ಹೈವೆ ವಿಸ್ಕಿ ಬಾಟಲ್ ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲು ಪ್ರತ್ಯೇಕವಾಗಿ ತೆರೆದು ಬಿಳಿ ಬಟ್ಟೆಯಲ್ಲಿ ಸುತ್ತಿ ಇಲಾಖಾ ಸೀಲಿನಿಂದ ಮೊಹರು ಮಾಡಲಾಯಿತು. ಉಳಿದ ಮಧ್ಯದ ಬಾಟಲ್ ಗಳನ್ನು ಇಲಾಖಾ ಸೀಲನಿಂದ ಮೊಹರು ಮಾಡಲಾಯಿತು. ಮಾದರಿ ಚೀಟಿಗಳನ್ನು ತಯಾರಿಸಿ ಬಾಟಲ್ ಗಳಿಗೆ ಅಂಟಿಸಲಾಯಿತು. ಮಾದರಿ ಸೀಲಿನ ನಕಲು ತಯಾರಿಸಿ ಬಾಟಲ್ ಗಳ ಮೇಲೆ ಹಾಕಲಾಯಿತು. ಆರೋಪಿಯನ್ನು ದಸ್ತಗಿರಿ ಮಾಡಿ ಮಧ್ಯದ ಬಾಟಲ್ ಗಳನ್ನು ಇಲಾಖಾ ಪರ ಅಮಾನತ್ತುಪಡಿಸಿಕೊಳ್ಳಲಾಯಿತು, ನಂತರ ಆರೋಪಿಯೊಂದಿಗೆ ಕಛೇರಿಗೆ ಬಂದು ಠಾಣಾ ಮೊಕ್ಕದಮೆ ಸಂಖ್ಯೆ 5/8 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿಕೊಂಡಿರುತ್ತೇವೆ. ನಂತರ ಆರೋಪಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇವೆ.

ಸದರಿ ಪ್ರಕರಣ ತನಿಖೆ ಮುಂದುವರೆಸಿ ಮಾದರಿ ತೆಗೆದ ಮಧ್ಯದ ಬಾಟಲಿಗಳನ್ನು ಚಾಸಾ 5 ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಡಲಾಯಿತು. ದಿಃ12.02.2009 ರಂದು ರಾಸಾಯನಿಕ ವರದಿ ಪಡೆದುಕೊಂಡಿರುತ್ತೇನೆ. ಆರೋಪಿ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತೇನೆ. ನಿಪಿ 1 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ 1 (ಇ), ಆರೋಪಿ ಸ್ವ ಇಚ್ಚಾ ಹೇಳಿಕೆಯನ್ನು ನಿಪಿ 6, ಸಾಕ್ಷಿ ಸಹಿಯನ್ನು ನಿಪಿ 6(ಎ), ಶೋಧನೆ ಸಮುಚ್ಚಿತ ಆದಾರ ನಿಪಿ 7, ಸಾಕ್ಷಿ ಸಹಿಯನ್ನು ನಿಪಿ 7

(ಎ), ಅಮಾನತ್ತುಪಡಿಸಿಕೊಂಡ ವಸ್ತುಗಳ ಪಟ್ಟಿ ನಿಪಿ 8, ಸಾಕ್ಷಿ ಸಹಿಯನ್ನು ನಿಪಿ 8 (ಎ) ಎಂದು ಗುರುತಿಸಲಾಯಿತು. ಮುದ್ದೆಮಾಲು 1 ರಿಂದ 28 ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ -**

ಸದರಿ ದಿನ ಕರ್ತವ್ಯಕ್ಕೆ ಹಾಜರಾದ ಬಗ್ಗೆ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ದಿನ ನಮ್ಮ ಸಿಬ್ಬಂದಿಗಳು ಕರ್ತವ್ಯದಲ್ಲಿ ಇದ್ದರು ಎಂದು ತೋರಿಸಲು ದಿನಚರಿಯನ್ನು ಹಾಜರುಪಡಿಸಿಲ್ಲ. ನಮ್ಮ ಕೇಂದ್ರ ಕಛೇರಿಯಿಂದ ಘಟನಾ ಸ್ಥಳ 28 ಕಿ.ಮೀ ಆಗುತ್ತದೆ. ಘಟನಾ ಸ್ಥಳಕ್ಕೆ ವಡರಗುಡಿ, ಹಿರೇಕೆರೆಯೂರು, ಗದ್ದಿಗೆ ಮಾರ್ಗವಾಗಿ ಹೋಗಿರುತ್ತೇವೆ. ಮಾರ್ಗ ಮಧ್ಯದಲ್ಲಿ ಗಸ್ತು ಮಾಡದೇ ನೇರವಾಗಿ ಸ್ಥಳಕ್ಕೆ ಹೋಗಿರುತ್ತೇವೆ. ಬಾತ್ಮಿದಾರರು ಆರೋಪಿಯ ಚಹರೆ ಮತ್ತು ಮನೆ ವಿಳಾಸ ತಿಳಿಸಿದ್ದರು. ಸದರಿ ಮನೆ ಆರೋಪಿಗೆ ಸೇರಿದ್ದು ಎಂದು ತೋರಿಸಲು ಅಲ್ಲಿಂದ ದಾಖಲೆಗಳನ್ನು ವಶಪಡಿಸಿಕೊಂಡಿಲ್ಲ. ಸಿಸಿ 449/9 ರಲ್ಲಿ ನಾನು 1 ನೇ ಆರೋಪಿ ಮನೆ ವಿಳಾಸ ಗೊತ್ತಿಲ್ಲ ಎಂದು ಹೇಳಿರುತ್ತೇನೆ ಎಂದರೆ ಬಾತ್ಮಿದಾರರು ವಿಳಾಸ ಹೇಳಿದ್ದು ನಂತರ ಸ್ಥಳೀಯರನ್ನು ವಿಚಾರಿಸಿ ಆರೋಪಿ ಮನೆ ತಿಳಿದುಕೊಂಡಿರುತ್ತೇನೆ. ಸಾಮಾನ್ಯವಾಗಿ ಅಧಿಕಾರಿಗಳು ಹಳ್ಳಿಗೆ ಹೋದರೆ ಸಾಕಷ್ಟು ಜನರು ಸೇರುತ್ತಾರೆ ಎಂದರೆ ಸರಿ. ಅಲ್ಲಿ ಇದ್ದ ಸ್ಥಳೀಯರ ಸಾಕ್ಷಿಯಾಗಿ ಬರಲು ನಿರಾಕರಿಸಿರುತ್ತಾರೆ. ಮಹಜರ ಸಮಯದಲ್ಲಿ ಸದರಿ ಸ್ಥಳದ ಫೋಟೋ ತೆಗೆದಿರುವುದಿಲ್ಲ. ಸದರಿ ಮುದ್ದೆಮಾಲುಗಳನ್ನು ಆರೋಪಿ ಎಲ್ಲಿಂದ ತಂದಿರುತ್ತಾರೆ ಎಂದು ವಿಚಾರಿಸಿರುತ್ತೀರಾ ಎಂದರೆ ಕರಿಮುದ್ದೆನಹಳ್ಳಿ ಶಿವಕುಮಾರ್ ರವರಿಂದ ತಂದಿರುವುದಾಗಿ ತಿಳಿಸಿರುತ್ತಾರೆ.

2 ನೇ ಆರೋಪಿ ಎಲ್ಲಿಂದ ತಂದಿರುತ್ತಾರೆ ಎಂದು ವಿಚಾರಿಸಿರುತ್ತೀರಾ ಎಂದರೆ ಅವರು ಸಿಕ್ಕಿರಲಿಲ್ಲ ನಂತರ ನಾನು ವರ್ಗಾವಣೆ ಆಗಿರುತ್ತೇನೆ ಎಂದು ತಿಳಿಸಿರುತ್ತಾರೆ. ಸದರಿ ಮನೆ ಆರೋಪಿಗೆ ಸೇರಿದೆ ಎಂದು ತೋರಿಸಲು ಆತನ ಮನೆ ನಂ ಅಥವಾ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಿನ 2 ನೇ ಆರೋಪಿ ಮನೆಗೆ ಹೋಗಿರುತ್ತೀರಾ ಎಂದರೆ ವಿಚಾರಿಸಿದಾಗ ಆತ ಮನೆಯಲ್ಲಿ ಇಲ್ಲ ಎಂದು ತಿಳಿದು ಬಂದಿರುತ್ತದೆ ಮತ್ತು ರಾತ್ರಿಯಾದ ಕಾರಣ ಹೋಗಿರಲಿಲ್ಲ. ಆರೋಪಿ ಮನೆ ಮುಂಭಾಗ ಶೀಟ್ ಹಾಕಿದ್ದು, ಹಿಂಭಾಗ ಮಂಗಳೂರು ಹಂಚಿನಿಂದ ಕೂಡಿತ್ತು. ಸದರಿ ದಿನ ನಾವು ಯಾವುದೇ ದಾಳಿಗೆ ಹೋಗಿರುವುದಿಲ್ಲ, ಇಲಾಖಾ ಅಂಕಿ ಅಂಶಗಳಿಗೋಸ್ಕರ ಸುಳ್ಳು ಪ್ರಕರಣ

ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ನ್ನು ಠಾಣೆಯಲ್ಲಿ ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ಧ ಯಾವುದೇ ಸಾಕ್ಷ್ಯದಾರ ಇಲ್ಲದೇ ಇದ್ದರು ಮತ್ತು ಮುದ್ದೆಮಾಲಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**